ಕರ್ನಾಟಕ ಸರ್ಕಾರ
ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಕನಕದಾಸ ಬಡಾವಣೆ, ವಿಜಯಪುರ -586109

ದೂರವಾಣಿ ಸಂಖ್ಯೆ: 08352-276932 ಫ್ಯಾಕ್ಸ್ ಸಂಖ್ಯೆ: 08352 276932

ಸಂಖ್ಯೆ:ಹಿಂವಕಇ/ಗೂಪ್-ಡಿ/ನೇರ ನೇಮಕಾತಿ/ಸಿಆರ್- 07/2017-18 ದಿನಾಂಕ : 12-01-2018

# ಪತ್ರಿಕಾ ಪ್ರಕಟಣೆ

ವಿಷಯ: ವಿಜಯಪುರ ಜಿಲ್ಲೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಗ್ರೂಪ್-ಡಿ ವೃಂದದ ಅಡುಗೆಯವರು ಮತ್ತು ಅಡುಗೆ ಸಹಾಯಕರ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಸ್ಥಳ ನಿಯುಕ್ತಿಗೊಳಿಸಲು ಕೌನ್ಸಲಿಂಗ್‌ಗೆ ಹಾಜರಾಗುವ ಕುರಿತು.

ಉಲ್ಲೇಖ: ಸರಕಾರದ ಆದೇಶ ಸಂಖ್ಯೆ: ಹಿಂವಕ 12 ಬಿಇಎ 2018, ಬೆಂಗಳೂರು, ದಿನಾಂಕ: 08-01-2018.

*****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ವಿಜಯಪುರ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಅಡುಗೆಯವರು ಹಾಗೂ ಅಡುಗೆ ಸಹಾಯಕರ ಹುದ್ದೆಗಳಿಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿಗೊಳಿಸಲು ದಿನಾಂಕ : 18-01-2018 ರಂದು ಜಿಲ್ಲಾ ಪಂಚಾಯತ ಸಭಾ ಭವನ ವಿಜಯಪುರದಲ್ಲಿ ಕೌನ್ಸಿಲಿಂಗ್ ಏರ್ಪಡಿಸಲಾಗಿದೆ. ಸದರಿ ಕೌನ್ಸಿಲಿಂಗಿಗೆ ಅಭ್ಯರ್ಥಿಗಳು ಕಡ್ಡಾಯವಾಗಿ ಹಾಜರಾಗಲು ಸೂಚಿಸಿದೆ. ಕೌನ್ಸಿಲಿಂಗ್‌ಗೆ ಹಾಜರಾಗದೇ ಇದ್ದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದೆಂದು ತಿಳಿಸಿದೆ.

## ಕೌನ್ಸಿಲಿಂಗ್ ಸ್ಥಳ ಮತ್ತು ದಿನಾಂಕ, ಸಮಯ

| ಹುದ್ದೆ | ದಿನಾಂಕ | ಸಮಯ | ಸ್ಥಳ |
|---|---|---|---|
| ಅಡುಗೆಯವರು | 18-01-2018 | ಬೆಳಗ್ಗೆ 9:00 ಗಂಟೆಯಿಂದ ಮದ್ಯಾಹ್ನ 12:00 ಗಂಟೆಯವರೆಗೆ | ಜಿಲ್ಲಾ ಪಂಚಾಯತ, ಸಭಾ ಭವನ, ವಿಜಯಪುರ |
| ಅಡುಗೆ ಸಹಾಯಕರು | | ಮದ್ಯಾಹ್ನ 1:30 ಗಂಟೆಯಿಂದ ಸಾಯಂಕಾಲ 5:30 ಗಂಟೆಯವರೆಗೆ | |

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯಪುರ ದುರವಾಣಿ ಸಂಖ್ಯೆ 08352-276932ಗೆ ಸಂಪರ್ಕಿಸುವುದು.

ತಮ್ಮ ವಿಶ್ವಾಸಿ,

ಜಿಲ್ಲಾ ಅಧಿಕಾರಿಗಳು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ವಿಜಯಪುರ

E/Bevoor (f) Bevoor All Ltrs New